

## ಶ್ವೇತ ಸುಂದರಿ

# ಹೃದಯ ಒಡೆದ ಬಳಿಕ..

**ನೆ**ಚ್ಚಿಕೊಂಡ ಗಂಡು ಕೈಕೊಟ್ಟರೆ ಹೆಣ್ಣುಮಕ್ಕಳು ಏನು ಮಾಡುತ್ತಾರೆ? ಅದರಲ್ಲೂ ಆಕೆ ಹೆಸರಾಂತ ಸಿನಿಮಾ ತಾರೆಯಾಗಿದ್ದರೆ..?

ಟಬೂ ಗೊತ್ತಲ್ಲ? ಆಕೆಗೂ ಹಾಗೆಯೇ ಆಯಿತು. ಆಕೆ ತೆಲುಗು ಚಿತ್ರನಟ ನಾಗಾರ್ಜುನನನ್ನು ಗಟ್ಟಿಯಾಗಿ ನಂಬಿಕೊಂಡಿದ್ದಳು. ಎಷ್ಟೆಂದರೆ, ಆತನ ಗೆಳೆತನಕ್ಕಾಗಿ ಮುಂಬೈಯನ್ನು ಬಿಟ್ಟು ಬಂದು ಹೈದರಾಬಾದ್‌ನಲ್ಲೇ ನೆಲೆಸಿದಳು. 2007ರಲ್ಲಿ 'ಚೀನೀ ಕಮ್' ಎಂಬ ಅಪರೂಪದ ಚಿತ್ರವೊಂದರಲ್ಲಿ ಅಮಿತಾಭ್ ಬಚ್ಚನ್ ಜತೆ ನಟಿಸಿದ ಬಳಿಕ ಆಕೆ ಬಾಲಿವುಡ್‌ನಲ್ಲಿ ಕಾಣಿಸಿಕೊಳ್ಳಲೇ ಇಲ್ಲ. ಮೂರು ವರ್ಷಗಳ ಕಾಲ ಆಕೆಗೆ ಹೈದರಾಬಾದೇ ಮನೆ ಆಗಿತ್ತು. ಅಲ್ಲಿ ಟಬೂ ಸಂತಸದಿಂದಲೇ ಇದ್ದಳು.

ಆದರೆ 2011ರ ಆರಂಭವೇ ಆಕೆಗೆ ದುರದೃಷ್ಟ ಮುತ್ತಿಕೊಂಡಿತು. ಆಕೆ ತುಂಬ ನೆಚ್ಚಿಕೊಂಡಿದ್ದ ನಾಗಾರ್ಜುನ ದೂರವಾದ. ಅವರಿಬ್ಬರ ಮಧ್ಯೆ ಏನು ನಡೆಯಿತೋ ಯಾರಿಗೂ ಗೊತ್ತಿಲ್ಲ. ಟಬೂಳ ನಿಕಟ ಸ್ನೇಹಿತರಿಗೂ ಗೊತ್ತಾದದ್ದು– ಇಬ್ಬರ ಸಂಬಂಧ ಮುರಿದುಬಿತ್ತು ಎನ್ನುವುದಷ್ಟೆ! ಏಕೆ, ಏನು, ಹೇಗೆ... ಎನ್ನುವುದು ಪ್ರಶ್ನೆಗಳಾಗಿಯಷ್ಟೇ ಉಳಿಯಿತು. 'ಸಂಸಾರಸ್ಥ ನಾಗಾರ್ಜುನ ತೆಗೆದುಕೊಂಡ ನಿರ್ಧಾರ ಸರಿ' ಎಂದವರು ಹಲವರು. ಆತ ತೆಲುಗಿನ ಸೂಪರ್ ಹೀರೊ. ಮೊದಲೇ ಸಿನಿಮಾ ಮನೆತನ; ಜತೆಗೆ ಸೂಪರ್‌ಹಿಟ್ ಚಿತ್ರಗಳನ್ನು ಸದಾ ಕೊಡುತ್ತಿರುವ ಬ್ಯುಸಿ ನಟ.

ಟಬೂ ಕೂಡಾ ತುಟಿಪಿಟಕ್ಕೆನ್ನಲಿಲ್ಲ. 2011ರಲ್ಲಿ ಆಕೆ ಯಾರ ಕಣ್ಣಿಗೂ ಬೀಳಲೇ ಇಲ್ಲ. ಟಬೂ ಎನ್ನುವ ನಟಿಯೊಬ್ಬಳು ಇದ್ದಾಳೆ ಎನ್ನುವುದನ್ನೇ ಬಾಲಿವುಡ್ ಮರೆತು ಕುಳಿತಿತ್ತು. ಅದಕ್ಕೆ ತಕ್ಕಂತೆ ಭಗ್ನಹೃದಯಿ ಟಬೂ ಚಿಪ್ಪಿನೊಳಗೆ ಅವಿತುಕೊಂಡಳು. ಯಾವ ಸಮಾರಂಭದಲ್ಲೂ, ಪಾರ್ಟಿಯಲ್ಲೂ ಕಾಣಿಸಿಕೊಳ್ಳಲಿಲ್ಲ. ತಾನಾಯಿತು, ತನ್ನ ದುಃಖವಾಯಿತು ಎಂಬಂತೆ ಮನೆಯೊಳಗೆ ಸೇರಿಕೊಂಡಳು.

ಟಬೂ ಬಾಲಿವುಡ್ ಕಂಡ ಸರಳ ಸುಂದರ ಹುಡುಗಿ. ಅಭಿನಯದಲ್ಲಂತೂ ಆಕೆಯದ್ದು ತಾದಾತ್ಮ್ಯ. ಆಕೆಯ ಮುಖವನ್ನು ದಿಟ್ಟಿಸಿ ನೋಡಿದರೆ ದುಃಖವೇ ಮಡುಗಟ್ಟಿದಂತೆ ಕಾಣಿಸುವುದೂ ಸುಳ್ಳಲ್ಲ. ಭಾವುಕ ಪಾತ್ರಗಳಲ್ಲಿ ಟಬೂ ತಾನೇ ತಾನಾಗಿ ಮುಳುಗಿ ಬಿಡುತ್ತಾಳೆ. ಇದುವರೆಗೆ ನಟಿಸಿದ ಆಕೆಯ ಚಿತ್ರಗಳಲ್ಲಿ ಆರಂಭದ ಕೆಲವು ಚೆಲ್ಲು ಪಾತ್ರಗಳನ್ನು ಬಿಟ್ಟರೆ ಗಂಭೀರ ಪಾತ್ರಗಳೇ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚೊತ್ತಿರುವುದು.

ಹಾಗೆ ನೋಡಿದರೆ ಟಬೂಗೆ ಇದು ಮೊದಲ ಪ್ರೇಮಭಗ್ನವಲ್ಲ. ಚಿತ್ರರಂಗಕ್ಕೆ ಕಾಲಿಟ್ಟ ಆರಂಭದಲ್ಲೇ ನಿರ್ಮಾಪಕ ಸಾಜಿದ್ ನಾಡಿಯದ್‌ವಾಲಾ ಜತೆಗೆ ಆಕೆಯ ಹೆಸರು ತಳುಕು ಹಾಕಿಕೊಂಡಿತ್ತು. ಅದು 14 ವರ್ಷಗಳ ಹಿಂದಿನ ಕಥೆ. ಅವರ ನಡುವಣ ಸ್ನೇಹ–ಪ್ರೇಮದ ಕೊಂಡಿ ಕಳಚಿದ ಬಳಿಕವೂ ಇಬ್ಬರೂ ಪರಸ್ಪರ ವೈರಿಗಳಾಗಲಿಲ್ಲ. ಚೆನ್ನಾಗಿಯೇ ಇದ್ದರು. ಆ ಹೊಡೆತವನ್ನು ತಾಳುವ ಶಕ್ತಿ ಬಹುಶಃ ಟಬೂಳಲ್ಲಿ ಇತ್ತೇನೋ! ಆದರೆ ನಾಗಾರ್ಜುನ ಜತೆಗಿನ ಸಖ್ಯ ಕಡಿದುಕೊಂಡ ಬಳಿಕ ಟಬೂ ತೀರಾ ಏಕಾಂಗಿಯಾದಳು. ಮಡುಗಟ್ಟಿದ ದುಃಖದೊಂದಿಗೆ ಮೌನಿಯಾದಳು!

ಇತ್ತೀಚೆಗೆ ನಿರ್ದೇಶಕ ಮಹೇಶ್ ಮಂಜ್ರೇಕರ್ ಟಬೂಳನ್ನು ಹುಡುಕಿಕೊಂಡು ಹೋಗಿದ್ದಾನೆ. ಆತನ ಬಳಿಯಲ್ಲೊಂದು ಕಥೆಯಿತ್ತು. ಈ ಹಿಂದೆ ಆತನೇ ನಿರ್ದೇಶಿಸಿದ್ದ 'ಅಸ್ತಿತ್ವ' ಎನ್ನುವ ವಿಭಿನ್ನ ಚಿತ್ರದಲ್ಲಿ ಟಬೂ ಅದ್ಭುತ ಅಭಿನಯ ನೀಡಿದ್ದಳು. ಈಗ ಇನ್ನೊಂದು ಚಿತ್ರ– ಅದರ ಹೆಸರು 'ವೈಟ್!' ಈ ಚಿತ್ರದ ಕಥೆಯೂ 'ಅಸ್ತಿತ್ವ'ದಂತೆಯೇ ಇದೆಯಂತೆ.

ಮಹೇಶ್ ಟಬೂ ಮುಂದೆ ಕುಳಿತು ಚಿತ್ರದ ಕಥೆ ಹೇಳಿದ್ದಾನೆ. ಕಥೆಯನ್ನು ಕೇಳುತ್ತಿದ್ದಂತೆಯೇ ಟಬೂ ಕಣ್ಣಿಂದ ನೀರು ಇಳಿಯತೊಡಗಿದೆ! ಅರ್ಧ ಗಂಟೆಗೂ ಹೆಚ್ಚು ಕಾಲ ಟಬೂ ಅಳುತ್ತಲೇ ಕಥೆ ಕೇಳಿದಳಂತೆ! 'ಈ ಪಾತ್ರವನ್ನು ನೀನೇ ಮಾಡಬೇಕು ಎನ್ನುವುದು ನನ್ನ ಇಚ್ಛೆ. ಹೂಂ ಅಂತೀಯಾ..?' ಎಂದು ಮಹೇಶ್ ಪ್ರಶ್ನೆ ಕೇಳಿದರೆ, ಟಬೂ ಹಾಗೆಯೇ ಸುಮ್ಮನೆ ಕುಳಿತಿದ್ದಳಂತೆ. ಹಾಂ ಇಲ್ಲ.. ಹೂಂ ಇಲ್ಲ! ಹತ್ತು ನಿಮಿಷ ಆಕೆಯ ಮುಂದೆ ಸುಮ್ಮನೇ ಕುಳಿತಿದ್ದ ಮಹೇಶ್ ಮಂಜ್ರೇಕರ್ ಮಾತನಾಡದೆ ಎದ್ದು ಹೋಗಿದ್ದಾನೆ. ಆಕೆಯ ಉತ್ತರಕ್ಕಾಗಿ ಮಹೇಶ್ ಈಗಲೂ ಕಾಯುತ್ತಿದ್ದಾನಂತೆ.

ತನ್ನ ಹಳೆಯ ಗೆಳತಿಯ ಬಗ್ಗೆ ಸಾಜಿದ್ ಹೇಳುತ್ತಾನೆ– 'ಟಬೂ ತುಂಬ ಭಾವುಕ ಹುಡುಗಿ. ಎಷ್ಟೆಂದರೆ ಆಕೆ ಟೀವಿಯಲ್ಲಿ ಕಾರ್ಟೂನ್ ನೋಡಿ ಅಳುತ್ತಿದ್ದುದುಂಟು. ಹಕ್ಕಿಯೊಂದಕ್ಕೆ ಸ್ವಲ್ಪ ಗಾಯವಾದರೂ ಆಕೆ ಅಳುತ್ತಿದ್ದಳು. ಈ ಹೃದಯಹೀನ ಉದ್ಯಮದಲ್ಲಿ ಆಕೆ ಬಹುಶಃ ಸ್ವಲ್ಪ ಹೆಚ್ಚೇ ಮೃದುವಾಗಿದ್ದಾಳೆ ಅನ್ನಿಸುತ್ತೆ. ಇಲ್ಲಿ ಹೆಣ್ಣಿನ ಭಾವುಕತೆಗೆ ಯಾವ ಬೆಲೆಯೂ ಇಲ್ಲ. ಇಲ್ಲಿ ನಿಮಗೆ ದಪ್ಪ ಚರ್ಮ ಬೇಕು. ಟಬೂಗೆ ಹಾಗೆ ದಪ್ಪ ಚರ್ಮ ಬೆಳೆಸಿಕೊಳ್ಳಲು ಆಗಿಲ್ಲ.."

ಕಳೆದ ವಾರ ಹೊಸ ಸುದ್ದಿಯೊಂದು ಬಂದಿದೆ. ಒಂದು ವರ್ಷದ ಬಳಿಕ ಮುಂಬೈಯಲ್ಲಿ ಕಳೆದ ವಾರ ಫರ್ಹಾ ಖಾನ್‌ಳ ಬರ್ತ್‌ಡೇ ಪಾರ್ಟಿಯಲ್ಲಿ ಟಬೂ ಮೊದಲ ಬಾರಿಗೆ ಕಾಣಿಸಿಕೊಂಡಳಂತೆ. ಆಕೆಯ ಗೆಳತಿಯರು ಇದೇ ಮೊದಲ ಬಾರಿಗೆ ಅವಳ ಮುಖದಲ್ಲಿ ಸ್ವಲ್ಪ ಸಂತಸ ಕಂಡಿದ್ದಾರೆ. ಬಹುಶಃ ಸಂಜಯ್ ಮಂಜ್ರೇಕರ್‌ನ 'ವೈಟ್' ಚಿತ್ರದಲ್ಲಿ ನಟಿಸಲು ಈ ಶ್ವೇತಸುಂದರಿ ಶೀಘ್ರವೇ ಒಪ್ಪಬಹುದೇನೋ..

■ ಬಿಂದು